ನೀವು ಏನು ಹೇಳಿದ್ದೀರಿ, ಇವತ್ತಿನತನಕ 7048 ಮನೆಗಳು ಕಂಪ್ಲೀಟ್ ಆಗಿವೆ;ಹೌಸಿಂಗ್ ಬೋರ್ಡ್ ಮತ್ತು ಡಿಸಿ ಕಡೆಯಿಂದ , ಹೌಸಿಂಗ್ ಬೋರ್ಡ್‌ನಿಂದ 40 ಸಾವಿರ ಪೈಕಿ 6,200 ಅಂಡರ್ ಪ್ರೊಗ್ರೆಸ್ ಇದೆ; ಮತ್ತೆ ಡಿಸಿ ಕಡೆಯಿಂದ 64,880 ಮನೆಗಳು are under progress ಹೀಗೆ ಒಟ್ಟು 1ಲಕ್ಷದ 6 ಸಾವಿರ ಮನೆ ಪೈಕಿ 7048 ಮನೆ ಕಂಪ್ಲೀಟ್ ಆಗಿವೆ ಮತ್ತು 75 ಸಾವಿರ ಮನೆಗಳು ಅಂಡರ್ ಪ್ರೊಗ್ರೆಸ್ ನಲ್ಲಿವೆಯೆಂದು; ಈ 7048 ಮನೆಗಳನ್ನು ನಿಮ್ಮ ಸ್ಟೇಟ್‌ಮೆಂಟ್ ಪ್ರಕಾರ ಕಂಪ್ಲೀಟ್ ಮಾಡುವುದಕ್ಕೆ ಕನಿಷ್ಟ 11ಕೋಟಿ ರೂಪಾಯಿ ಬೇಕು. 75 ಸಾವಿರ ಮನೆಗಳು ಪ್ರೊಗ್ರೆಸ್‌ನಲ್ಲಿವೆ ಎಂದು ಹೇಳುತ್ತೀರಿ, 75 ಸಾವಿರ ಮನೆಗಳು ಅಂಡರ್ ಪ್ರೊಗ್ರೆಸ್ ಇರಬೇಕಾದರೆ 100 ರೂಪಾಯಿಗೆ ಎರಡು ರೂಪಾಯಿ ಖರ್ಚು ಮಾಡಿದ್ದೀರೇನು ನೀವು? 75 ಸಾವಿರ ಮನೆಗಳು ಅಂಡರ್ ಪ್ರೊಗ್ರೆಸ್ ಇರಬೇಕಾದರೆ ಕನಿಷ್ಟ ನೀವು ಒಂದು ಮನೆಗೆ 15-20 ಸಾವಿರ ಖರ್ಚು ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :- ಸಾಂಡ್ರಾರವರೇ, ನೀವು ಕುಳಿತುಕೊಳ್ಳಿ. ಈ ಪ್ರಶ್ನೆ ಬಗ್ಗೆ ನಿಮ್ಮಲ್ಲಿ ಸರಿಯಾದ ಹಾಗೂ ಖಚಿತವಾದ ಮಾಹಿತಿ ಇಲ್ಲ ಎಂದು ನನಗೂ ಅನಿಸುತ್ತದೆ. ಆದಕ್ಕೆ ನಾನು ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವ್ಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಾವು ಈ ರೀತಿ ತೀರ್ಪನ್ನು ಕೊಟ್ಟಮೇಲೆ ಅವರು ರಾಜೀನಾಮೆಯನ್ನು ಕೊಡಬೇಕು. ಅವರು ಸಚಿವಸಂಪುಟದಲ್ಲಿ ಉಳಿಯಲು ಅರ್ಹರಲ್ಲ.

ಅಧ್ಯಕ್ಷರು:- ಆ ರೀತಿ ಎಷ್ಟು ರಾಜೀನಾಮೆಗಳನ್ನು ತೆಗೆದುಕೊಳ್ಳುತ್ತೀರಿ?

ವಿಷಯ:- ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸಿಗದೇ ಇರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 69(494)

ಶ್ರೀ ಸುಭಾಷ್ ಜೋಷಿ(ನಿಪ್ಪಾಣಿ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಸರ್ಕಾರದ ಹೊಸ ಆದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದರೆ, ಸರ್ಕಾರವು ಈ ಆದೇಶವನ್ನು ಹಿಂತೆಗೆದುಕೊಳ್ಳುವುದೇ?

(ಇ) ಈ ಆದೇಶವನ್ನು ಯಾವಾಗ ಹಿಂತೆಗೆದುಕೊಳ್ಳುವುದು?

ಶ್ರೀ ಧರ್ಮಸಿಂಗ್(ಸಮಾಜ ಕಲ್ಯಾಣ ಸಚಿವರು)

ಭಾರತ ಸರ್ಕಾರದ ನಿಯಮಾವಳಿಗಳಂತೆ ವಿದ್ಯಾರ್ಥಿ ವೇತನ ನೀಡಲು ವಿಧಿಸಿರುವ ಷರತ್ತುಗಳ ಪಾಲನೆಯ ಬಗ್ಗೆ ಇತ್ತೀಚೆಗೆ ನೀಡಲಾದ ಸುತ್ತೋಲೆಯ ಅನುಸಾರ ಪರಿಶೀಲನೆ ಪ್ರಾರಂಭ ಮಾಡಿದ್ದರಿಂದ ಕೆಲವು ಜಿಲ್ಲೆಗಳಲ್ಲಿ ವಿದ್ಯಾರ್ಥಿವೇತನ ಪಡೆಯಲು ತೊಂದರೆಯಾಗಿದೆಯೆಂದು ತಿಳಿದು ಬಂದಿದೆ.

ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

ಉದ್ಭವಿಸುವುದಿಲ್ಲ.

SRI SUBASH JOSHI:- Sir, I have asked one question. Whether it has come to the notice of the Government that SC/ST students are facing hardship in getting scholarships - - for which the Government said some hardships were caused. Second thing is that the Tahashildar has to issue 3 certificates. Whether it is possible for Tahashildar to issue three certificates for SC/ST students? I would like to bring to the notice of the Government only in Karnataka such type of conditions are there and not in other States. This is where the hardship has been caused. This is my allegation.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಜೋಷಿಯವರು ಹೇಳಿದಂತೆ ಅದು ರಾಜ್ಯಸರ್ಕಾರದ ಸುತ್ತೋಲೆ ಅಲ್ಲ. ನಾವು ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಎಲ್ಲಾ ಕಡೆಗೆ ಕಳಿಸಿದ್ದೇವೆ. ಆದರೂ ಕೂಡ ಕೆಲವು ಕಡೆ ಹಾರ್ಡ್‌ಶಿಫ್ ಆದಮೇಲೆ, ದಲಿತ ಸಂಘದ ಸಮಿತಿಯವರು, ಬೇರೆ ವಿದ್ಯಾರ್ಥಿ ಸಮಿತಿಯವರು ನನ್ನನ್ನು ಭೇಟಿ ಮಾಡಿದಮೇಲೆ, ಅವರ ಜೊತೆಯಲ್ಲಿ ನಾನು ಮಾತನಾಡಿದ ಮೇಲೆ, ಆ ಸುತ್ತೋಲೆಯನ್ನೂ ಕೂಡ ವಾಪಸ್ ಪಡೆದಿದ್ದೇವೆ. ಈಗ ಯಾರಿಗೂ ಕೂಡ ತೊಂದರೆ ಆಗುತ್ತಿಲ್ಲ. ಅದನ್ನು ನಿಲ್ಲಿಸಿದ್ದೇವೆ.

ಶ್ರೀ ಸುಭಾಷ್ ಜೋಷಿ :- ತೊಂದರೆಯಾಗುತ್ತಿದೆ.

I know in my constitutency the SC/ST students are facing lot of hardship in getting the certiciate and due to delay in getting such certificates, many students are deprived of the scholarship for that year. In Maharashtra, there is no such rule imposed. It is also ruled by the Central Government and there is no such condition. Only in Karnataka, such a condition is imposed..

ಶ್ರೀ ಧರ್ಮಸಿಂಗ್:- ಕರ್ನಾಟಕದಲ್ಲಿಯೂ ಸಹ ಆ ಸುತ್ತೋಲೆಯನ್ನೂ ಹಿಂತೆಗೆದುಕೊಂಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ನಿಮ್ಮ ಮನೆ ಎಷ್ಟು ದೂರದಲ್ಲಿದೆ;ಮನೆಯಲ್ಲಿ ಎಷ್ಟು ಜನ ಅಣ್ಣತಮ್ಮಂದಿರು ಇದ್ದಾರೆ? ಯಾರ್ಯಾರು ಕೆಲಸಕ್ಕೆ ಹೋಗುತ್ತಾರೆ? ಯಾರ್ಯಾರು ಇಲ್ಲವೆಂಬುದನ್ನೆಲ್ಲಾ ಕೇಳಿದರೆ ಯಾವ ತಹಶೀಲ್ದಾರರೂ ಕೂಡ ಆ ರೀತಿ ಸರ್ಟಿಫಿಕೇಟ್ ಕೊಡಲು ಬರುವುದಿಲ್ಲ. ಕೊಟ್ಟರೂ ಕೂಡ ಅದು ಕ್ರಮಬದ್ಧವಾಗುವುದಿಲ್ಲ. ಅಂಥ ಒಂದು ಸುತ್ತೋಲೆಯನ್ನು ಕೊಟ್ಟು ಮಕ್ಕಳು ಸ್ಕಾಲರ್‌ಶಿಫ್ ತೆಗೆದುಕೊಳ್ಳತಕ್ಕ ಸಮಯದಲ್ಲಿ, ಸ್ಕೂಲ್‌ಗಳಿಗೆ ಹೋಗತಕ್ಕ ಸಮಯದಲ್ಲಿ ತೊಂದರೆ ಮಾಡಿದ್ದಾರೆ. ಇದು ಸರ್ಕಾರಕ್ಕೆ ಗೌರವ ತರತಕ್ಕ ಕೆಲಸವಲ್ಲ. ದಯಮಾಡಿ ಇದನ್ನು ಹಿಂದಕ್ಕೆ ಪಡೆಯಬೇಕು. ಇದರಲ್ಲಿ ಏನೂ ಇಲ್ಲ, ನಿಮ್ಮ ಮನೆಯಲ್ಲಿ ಎಷ್ಟು ಜನ ಓದಿದ್ದಾರೆ? ನಿಮ್ಮ ಮನೆಯಲ್ಲಿ ಎಷ್ಟು ಜನರು ನೌಕರಿಯಲ್ಲಿದ್ದಾರೆ? ನಿಮ್ಮ ಮನೆ ಎಷ್ಟು

ದೂರದಲ್ಲಿದೆ ಎಂಬುದರ ಬಗ್ಗೆ ಸುತ್ತೊಲೆಯನ್ನು ಹೊರಡಿಸಿ ಪರಿಶಿಷ್ಟಜಾತಿಯ ಹುಡುಗರ ಸ್ಕಾಲರ್ ಶಿಪ್‌ನ್ನು ಡಿಪ್ರೈವ್ ಮಾಡಿದರೆ ಇದಕ್ಕಿಂತ ಕೆಟ್ಟ ಕೆಲಸ ಮತ್ತೊಂದು ಇಲ್ಲ. ದಯಮಾಡಿ ಇದನ್ನು ಹಿಂದಕ್ಕೆ ಪಡೆಯಬೇಕು.

ಶ್ರೀ ಧರ್ಮಸಿಂಗ್:- ಈಗ ಜೋಷಿಯವರು ಕೇಳಿದ ಪ್ರಶ್ನೆ ಸ್ಕಾಲರ್‌ಶಿಪ್‌ಗೆ ತೊಂದರೆಯಾಗುತ್ತಿದೆ, ಅದರ ಬಗ್ಗೆ ಸುತ್ತೊಲೆಯನ್ನು ಕಳಿಸಿದ್ದಾರೆಂದು. ಅದು ಭಾರತ ಸರ್ಕಾರದ ಸುತ್ತೊಲೆ. ನಾವು ಅದನ್ನೂ ಕೂಡ ಈಗ ಹಿಂದಕ್ಕೆ ಪಡೆದಿದ್ದೇವೆ. ಆದರೆ ತಾವು ಹೇಳುತ್ತಿರತಕ್ಕದ್ದು ಹಾಸ್ಟೆಲ್‌ಗಳ ತೊಂದರೆಯ ಬಗ್ಗೆ ಇರಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ:- ಇಲ್ಲ, ನಾನು ಹೇಳುತ್ತಿರುವುದೂ ಸಹ ಪರಿಶಿಷ್ಟ ಜಾತಿಯ ಮಕ್ಕಳಿಗೆ ಸ್ಕಾಲರ್‌ಶಿಪ್‌ನ್ನು ತೆಗೆದುಕೊಳ್ಳುವಲ್ಲಿ ತೊಂದರೆಯಾಗುತ್ತಿರುವ ಮತ್ತು ವಿಳಂಬವಾಗುತ್ತಿರುವ ಬಗ್ಗೆಯೇ. ಹಾಸ್ಟೆಲ್‌ನ ವಿಚಾರ ಬೇರೆಯದ್ದಾಗಿದೆ.

ಶ್ರೀ ಧರ್ಮಸಿಂಗ್:- ಹಾಸ್ಟೆಲ್ ಬಗ್ಗೆ ಹೇಳುವುದಾದರೆ, ಅದರಲ್ಲಿ ಅನೇಕ ನಿಯಮಗಳಿವೆ. ಯಾವುದಾದರೂ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗೆ ಪ್ರವೇಶ ಅವಕಾಶವನ್ನು ಕೊಡಬೇಕಾದರೆ ಆ ವಿದ್ಯಾರ್ಥಿ 8 ಕಿ.ಮೀ. ದೂರದಲ್ಲಿರಬೇಕು. ಮತ್ತೆ ಆದಾಯದ ಮಿತಿ ಇರಬೇಕು. ಇದು ನಮ್ಮ ಕೈಯಲ್ಲಿ ಇಲ್ಲ. ಈಗಾಗಲೇ ನಮ್ಮ ಇಲಾಖೆಯ ಕಾರ್ಯದರ್ಶಿಯವರು ಮತ್ತು ಸೋಷಿಯಲ್ ವೆಲ್‌ಫೇರ್‌ನ ನಿರ್ದೇಶಕರು ಕೇಂದ್ರ ಸಚಿವರು ಕರೆದಂಥ ಸಭೆಯಲ್ಲಿ ಹಾಜರಾಗಿ they have represented this case... ಮೊನ್ನೆ ಇದರ ಬಗ್ಗೆ ಕೇಂದ್ರ ಸಚಿವರಾದ ಶ್ರೀಮಾನ್ ಸೀತಾರಾಮ್‌ಕೇಸರಿಯವರು ಬೆಂಗಳೂರಿಗೆ ಬಂದಂಥ ಸಮಯದಲ್ಲಿ ಕೂಡ ನಾನು ಅವರ ಜೊತೆ ಮಾತನಾಡಿದ್ದೇನೆ. ಇದಕ್ಕೆ ಪ್ಲಾನಿಂಗ್ ಕಮೀಷನ್ ಕೂಡ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. ಈ ಮಧ್ಯದಲ್ಲಿ ಏನು ಸ್ಕಾಲರ್‌ಶಿಪ್ ಕೊಡುವ ಬಗ್ಗೆ ಮತ್ತು ಹಾಸ್ಟೆಲ್‌ಗೆ ಪ್ರವೇಶವನ್ನು ಕಲ್ಪಿಸುವ ಬಗ್ಗೆ ನಾವು ತಡೆಹಿಡಿದಿಲ್ಲ. ಇದರಲ್ಲಿ ಇಲ್ಲಿಯವರೆಗೆ ಯಾವ ಪದ್ಧತಿ ಬಂದಿತ್ತೋ ಅದನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಆದರೆ ಇದು ಶಾಶ್ವತವಾಗಿ ಮುಂದುವರೆಯಬೇಕಾದರೆ ಪ್ಲಾನಿಂಗ್ ಕಮೀಷನ್ ಒಪ್ಪಿಗೆಯನ್ನು ಕೊಡಬೇಕಾಗುತ್ತದೆ. Hostel admission ಬಗ್ಗೆ ಮತ್ತು ಸ್ಕಾಲರ್‌ಶಿಪ್ ಸಿಗುವ ಬಗ್ಗೆ ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಹೇಳುವುದಾದರೆ, 1993-94 ರಲ್ಲಿ ಅಂದರೆ 7ನೇ ಪಂಚವಾರ್ಷಿಕ ಯೋಜನೆಯಲ್ಲಿ we have provided Rs.17.82 crores. ಇದಕ್ಕೆ ನಾವು ರಾಜ್ಯ ಸರ್ಕಾರದವರು ಸಹ ಕೊಡಬೇಕಾಗಿದೆ. ಮತ್ತು ಕೇಂದ್ರ ಸರ್ಕಾರದಿಂದ 9 ಕೋಟಿ ಬರುತ್ತಿದೆ. ಇವತ್ತು 35,000 ಜನರಿಗೆ ಸ್ಕಾಲರ್‌ಶಿಪ್‌ನ್ನು ಕೊಡಬೇಕಾಗಿದೆ. ಅದಕ್ಕಾಗಿ ಸರ್ಕಾರದಿಂದ 4 ಕೋಟಿ 31 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ, ಮತ್ತು ಅದನ್ನು ಬಿಡುಗಡೆ ಮಾಡಲಾಗಿದೆ. ಇಲ್ಲಿ ಹಾರ್ಡ್‌ಶಿಪ್ ಆಗುವುದಿಲ್ಲ. ಆದರೆ ಇಲ್ಲಿ ಏನಾಗುತ್ತದೆಂದರೆ ಹೋದ ವರ್ಷ ಒಂದು ಲಕ್ಷದ ಇಪ್ಪತ್ತೊಂದು ಸಾವಿರಜನರಿಗೆ ಸ್ಕಾಲರ್‌ಶಿಪ್‌ನ್ನು ಕೊಡಬೇಕೆಂದಿದ್ದರೆ ಈ ವರ್ಷ ಅಂದರೆ 1993-94 ರಲ್ಲಿ 1 ಲಕ್ಷದ 28 ಸಾವಿರ ಜನರಿಗೆ ಕೊಡಬೇಕಾಗಿದೆ. ಈ ಸಂಖ್ಯೆಯು ಏಕೆ ಈ ರೀತಿ ಹೆಚ್ಚಾಗುತ್ತಿದೆ ಎಂಬ ಬಗ್ಗೆ ತಿಳಿಯಲು ಸರ್ಟಿಫಿಕೇಟ್ ಕೊಡುವ ಬಗ್ಗೆ ಸರಿಯಾಗಿದೆಯೇ; ಅದರಲ್ಲಿ ಏನಾದರೂ ತಪ್ಪು

ಇದೆಯೇ ಎನ್ನುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಆದರೆ ಹಾರ್ಡ್‌ಶಿಫ್‌ನ್ನು ಮಾಡುತ್ತಿಲ್ಲ. ಸ್ಕಾಲರ್‌ಶಿಫ್‌ನ್ನು ಕೊಡುತ್ತಿದ್ದೇವೆ ಹಾಗೂ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ.

ವಿಷಯ:- ರೇಷ್ಮೆ ಇಲಾಖೆಯಲ್ಲಿ ಕಾಮಗಾರಿ ಕೆಲಸಗಳನ್ನು ಅಧಿಕೃತವಾದ ಇಂಜಿನಿಯರ್‌ರವರ ಮೇಲ್ವಿಚಾರಣೆ ಇಲ್ಲದೆ ನಿರ್ವಹಿಸುತ್ತಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 70(418)

ಶ್ರೀ ಕೆ.ಎಂ.ಪುಟ್ಟು(ಕಿರುಗಾವಲು)

ಮಾನ್ಯ ರೇಷ್ಮೆ, ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಇಲಾಖೆಯಲ್ಲಿ ಸುಮಾರು ಆರು ಕೋಟಿ ರೂಪಾಯಿಗಳ ಕಾಮಗಾರಿ ಕೆಲಸಗಳು, ಅಧಿಕೃತವಾದ ಸಹಾಯಕ ಕಾರ್ಯಪಾಲಕ ಇಂಜಿನೀಯರ್‌ರವರ ಮೇಲ್ವಿಚಾರಣೆ ಇಲ್ಲದೆ ನಿರ್ವಹಿಸುತ್ತಿರುವುದು ಹಾಗೂ ಅಧಿಕೃತ ಅಧಿಕಾರಿಯಿಂದ ಕಾಮಗಾರಿಯ ಅಳತೆಗಳು ಪರಿಶೀಲನೆಯಾಗದೆ ಬಿಲ್ಲುಗಳು ಪಾವತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ತುಮಕೂರು ಜಿಲ್ಲೆ ಹಾಗೂ ಮಾಗಡಿ ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಾಮಗಾರಿ ಕೆಲಸಗಳನ್ನು ನೋಡಿಕೊಳ್ಳುತ್ತಿರುವ ಅಧಿಕೃತ ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಯಾರು?

ಇ) ಅವರನ್ನು ಈ ಕಾರ್ಯಕ್ಕೆ ನೇಮಿಸಿರುವ ಸರ್ಕಾರದ (ಲೋಕೋಪಯೋಗಿ ಇಲಾಖೆಯ) ಅಧಿಕೃತ ಆದೇಶ ಯಾವುದು?

ಡಾ ಜಿ.ಪರಮೇಶ್ವರ

(ರೇಷ್ಮೆ, ಕೃಷಿ ರಾಜ್ಯ ಸಚಿವರು)

-ಇಲ್ಲ-

ಒಬ್ಬರು ಸಹಾಯಕ ಕಾರ್ಯಪಾಲಕ ಅಭಿಯಂತರರು ಅಧಿಕೃತವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಅವರನ್ನು ಈ ಹುದ್ದೆಗೆ ನೇಮಿಸಿದ ಇಲಾಖಾ ಕ್ರಮವನ್ನು ಕೆಲಸದ ಹಿತದೃಷ್ಟಿಯಿಂದ ಒಪ್ಪಿಕೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಯೊಡನೆ ವ್ಯವಹರಿಸಲಾಗಿದೆ.

ಶ್ರೀ ಕೆ.ಎಂ.ಪುಟ್ಟು: ಸನ್ಮಾನ್ಯ ಅಧ್ಯಕ್ಷರೇ, ಒಂದು ಕಡೆ ಅಧಿಕೃತ ಇಂಜಿನಿಯರ್‌ಗಳಿಂದ ಕೆಲಸವನ್ನು ಮಾಡಿಸಿದ್ದೇವೆಂದು ಹೇಳುತ್ತಾರೆ ಮತ್ತೊಂದು ಕಡೆ ಎರವಲು ಸೇವೆಯನ್ನು ಪಡೆದಮೇಲೆ ಆ ಇಂಜಿನಿಯರನ್ನು ಆ ಇಲಾಖೆಯಲ್ಲಿಯೇ ಇಟ್ಟುಕೊಳ್ಳಬೇಕೆಂದು ಇಲಾಖೆಗೆ ಬರೆಯುತ್ತಾರೆ. ಈ ರೀತಿ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ದಿನಾಂಕ: 21-1-93 ರಲ್ಲಿ ಯಾರು ಎ.ಇ.ಇ. ಇದ್ದಾರೆ ಅವರು ಸಿ.ಟಿ.ಸಿ ಪ್ರಕಾರ ಮಾತ್ರ ಸಂಸ್ಥೆಗೆ ಹೋಗಿದ್ದಾರೆ. ಅಲ್ಲಿಂದ ನೀರಾವರಿ ಇಲಾಖೆಗೆ ಎರವಲನ್ನು ಕೊಟ್ಟಿದ್ದಾರೆ. ಆದರೆ ಅಂದಿನಿಂದ ಇಂದಿನವರೆಗೆ ಅಧಿಕೃತವಲ್ಲದ ಇಂಜಿನಿಯರಿಂದ ಸುಮಾರು 6 ಕೋಟಿ ರೂಪಾಯಿಗಳ ಕೆಲಸವನ್ನು ಇವರು ಮಾಡಿಸುತ್ತಿದ್ದಾರೆ, ಈವತ್ತಿನವರೆಗೂ ಬಿಲ್ಲನ್ನು ಕೊಡುತ್ತಿದ್ದಾರೆ, ಎಂ.ಇ.ಪುಸ್ತಕವನ್ನು ಬರೆಯುತ್ತಿದ್ದಾರೆ. ಆದರೆ ಯಾವ ಅಧಿಕಾರಿ ಕಾನೂನನ್ನು ಮುರಿದಿದ್ದಾರೋ, ಅಂಥ ಭ್ರಷ್ಟ ಅಧಿಕಾರಿಗೆ ಸಹಾಯಕರಾಗಿ ಮಾನ್ಯ ಸಚಿವರು ಉತ್ತರವನ್ನು ಹೇಳುವುದು ಅಷ್ಟೊಂದು ಸಮಂಜಸವಾಗಿಲ್ಲವೆಂದು ನಾನು ಹೇಳುತ್ತಿದ್ದೇನೆ.